ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 49 ಡಿವಿಪಿ (1) 2017.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 04-01-2018.

**ಇವರಿಗೆ,**

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,**
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

**ಮಾನ್ಯರೆ,**

**ವಿಷಯ:** ಅನುದಾನಿತ ಸಂಸ್ಥೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವ ಸಂಸ್ಥೆಯ ಮೇಲೆ ಕ್ರಮ ವಹಿಸುವ ಬಗ್ಗೆ

**ಉಲ್ಲೇಖ:**
1. ಶಾಸಕಾಂಗ ಉಪಸಮಿತಿ (Legislative subcommittee) ಮುಖ್ಯಾಂಶಗಳು (ಇ-ಮೇಲ್ ದಿನಾಂಕ 02-01-2018)
2. ಈ ಕಛೇರಿ ಪತ್ರ ಸಂಖ್ಯೆ ಡಿಟಿಇ 65 ಇಎಸ್‌ಟಿ 4(ಬಿ) 2010, ದಿನಾಂಕ 23-11-2010, 15-09-2015

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ದಿನಾಂಕ 02-01-2018 ರಂದು ನಡೆದ ಶಾಸಕಾಂಗ ಉಪಸಮಿತಿ (Legislative subcommittee) ಯ ಸಭೆಯ ನಡವಳಿಯಲ್ಲಿ ಯಾವ ಅನುದಾನಿತ ಸಂಸ್ಥೆಗಳು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ವಿಫಲವಾಗಿವೆಯೋ ಅಂತಹ ಸಂಸ್ಥೆಗಳಿಗೆ ಪ್ರಧಾನ ಕಾರ್ಯದರ್ಶಿಗಳು ಸರ್ಕಾರದ ವತಿಯಿಂದ ನೀಡಲಾಗುವ ವೇತನಾನುದಾನವನ್ನು ತಡೆಹಿಡಿಯಲು ಕ್ರಮ ಜರುಗಿಸಬಹುದು ಎಂದು ಸೂಚಿಸಲಾಗಿದೆ.

ಉಲ್ಲೇಖ(2) ರ ಈ ಕಛೇರಿ ಪತ್ರದಲ್ಲಿ ಪ್ರಾಚಾರ್ಯರು, ರೂರಲ್ ಪಾಲಿಟೆಕ್ನಿಕ್ (ಅನುದಾನಿತ), ಹುಲಕೋಟಿ ಸಂಸ್ಥೆಯಲ್ಲಿ ಇಲಾಖೆಯಿಂದ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಹಲವಾರು ಬಾರಿ ಸೂಚಿಸಿದ್ದರೂ ಸಹ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಂಡಿರುವುದಿಲ್ಲ.

ಆದುದರಿಂದ ರೂರಲ್ ಪಾಲಿಟೆಕ್ನಿಕ್ (ಅನುದಾನಿತ), ಹುಲಕೋಟಿ ಸಂಸ್ಥೆಗೆ ವೇತನಾನುದಾನವನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ತಮ್ಮ ಅನುಮತಿ ಹಾಗೂ ನಿರ್ದೇಶನ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು.
**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

ಪ್ರತಿ:

1) ಪ್ರಾಚಾರ್ಯರು, ರೂರಲ್ ಪಾಲಿಟೆಕ್ನಿಕ್ (ಅನುದಾನಿತ), ಹುಲಕೋಟಿ- ಇವರ ಮಾಹಿತಿಗಾಗಿ